ಇಂದೇನಾಯ್ತೋ... ಎಂದುಕೊಳ್ಳುವಾಗಲೇ ವಲ್ಲಿ, "ಈ ಹಾಡು... ಈ ಚಿತ್ರ... ಅವಳನ್ನು ಹಾಳು ಮಾಡಿಬಿಟ್ಟಿತಲ್ಲಮ್ಮ?" ಎಂದಳು. ಸುಭದ್ರಮ್ಮ ನಸುನಗುತ್ತ, "ಯಾರ ಬಗ್ಗೆ ಮಾತನಾಡುತ್ತಿರುವೆಯೆಂಬ ಅರಿವಿದೆಯಾ ವಲ್ಲಿ? ಅವಳು ಖ್ಯಾತ ನಟಿ ಸೌದಾಮಿನಿ. ಈ ಚಿತ್ರ... ಈ ಹಾಡಿನಿಂದಲೇ ಅವಳು ಪ್ರಖ್ಯಾತಳಾಗಿದ್ದು. ನಂತರ ಅನೇಕ ಚಿತ್ರಗಳಲ್ಲಿ ನಾಯಕಿಯಾಗಿ ಜನರ ಕಣ್ಮಣಿಯಾಗಿ ಮೆರೆದವಳು. ಕೊನೆಗೆ ಆ್ಯಕ್ಸಿಡೆಂಟಿನಲ್ಲಿ ತೀರಿಹೋದಳು. ಅವಳ ಬಗ್ಗೆ ಹೇಳುತ್ತಿರುವೆಯಲ್ಲ. ನಿನಗೆ ಹೇಗೆ ಗೊತ್ತು? ಅವಳ ಮನೆಯಲ್ಲೂ ಕೆಲಸ ಮಾಡುತ್ತಿದ್ದೆಯಾ?" ಎಂದು ತುಸು ವ್ಯಂಗ್ಯವಾಗೇ ಕೇಳಿದರು.

"ಆಂ!... ಹ್ಞೂಂ.. ಅಮ್ಮ. ನನ್ನಷ್ಟು ಹತ್ತಿರದಿಂದ ಅವಳನ್ನು ನೋಡಿ ಬಲ್ಲವರಾರು? ಈ ಚಿತ್ರದಿಂದ ಅವಳ ಬದುಕೇ ಹಾಳಾಯ್ತು. ಅರಳಿ ಮುಡಿಗೇರಬೇಕಾಗಿದ್ದ ಹೂವು ಕೆಸರಲ್ಲಿ ಬಿದ್ದು ಹೋಯಿತು" ಎಂದು ಮತ್ತೆ ಸೆರಗಿನಿಂದ ಕಣ್ಣೊರೆಸಿಕೊಂಡಳು. "ಹೌದೇನೆ? ನಿನಗೆ ನಿಜವಾಗಿಯೂ ಅವಳ ಬಗ್ಗೆ ಗೊತ್ತಾ? ಏನಾಯ್ತು ಹೇಳು" ಎಂದರು ಸುಭದ್ರಮ್ಮ ಕುತೂಹಲದಿಂದ. "ಬಿಡಿ ಅಮ್ಮ, ಅವಳ ಬದುಕು ಎಲ್ಲರೂ ಆಡಿಕೊಳ್ಳುವ ವಸ್ತುವಾಗಬಾರದು" ಎಂದು ವಲ್ಲಿ ಮತ್ತೆ ಅಕ್ಕಿಯಲ್ಲಿ ಬೆರಳಾಡಿಸಿದಳು. ಇಷ್ಟು ಕೇಳಿದ ಮೇಲೆ ಸುಭದ್ರಮ್ಮ ಬಿಟ್ಟಾರೇ? "ನನ್ನನ್ನು ಅಮ್ಮ ಅಂತೀಯಲ್ಲ... ಅವಳ ಬಗ್ಗೆ ಎಲ್ಲಾ ಹೇಳು. ನಾನಾರಿಗೂ ಹೇಳಲ್ಲ ಕಣೆ. ನಿನ್ನಾಣೆ" ಎಂದರು. ಅವಳ ಮನಸ್ಸು ಮತ್ತೆ ಡೋಲಾಯಮಾನವಾಯಿತು. ಕುಂಭಕೋಣಕ್ಕೆ ಬಂದಾಗಿನಿಂದ ತಮಿಳು ಕಲಿಸಿ ಕೆಲಸ ಕೊಟ್ಟು ನಿಜವಾಗಿಯೂ ಅಮ್ಮನಂತಾದವರು. "ಹೇಳೇ" ಎಂದು ಅನುನಯದ ಧ್ವನಿಯಲ್ಲಿ ಅವರು ಕೇಳುತ್ತಲೂ ಅಕ್ಕಿ ಬಿಟ್ಟು ಹಿಂದೆ ಒರಗಿ ಕುಳಿತು ಗತಕ್ಕೆ ಜಾರಿದಳು.

"ಈ ಸೌದಾಮಿನಿ ನಮ್ಮ ಹಳ್ಳಿಯಲ್ಲೇ ಹುಟ್ಟಿದ್ದು ಅಮ್ಮ. ಸಿರವಾರದಲ್ಲಿ. ತಂದೆತಾಯಿ ಬಡವರಾದರೂ ಮರ್ಯಾದಸ್ಥರು. ಹಳೇಪೇಟೆಯ ಆಚೆ ಅವರದೊಂದು ಮನೆ ಎಂಬ ಹೆಸರಿನ ಪುಟ್ಟ ಗೂಡು. ಅಪ್ಪ ವೆಂಕಟಪ್ಪ ತೋಟದಲ್ಲಿ ಮಾಲಿ ಕೆಲಸ ಮಾಡುತ್ತಿದ್ದರೆ ಅಮ್ಮ ದೇವಮ್ಮ ಇತರರ ಹೊಲದಲ್ಲಿ ನಾಟಿ, ಕಳೆ ಕೀಳೋದು ಅಂತ ಹೋಗೋಳು. ಇದ್ದೊಬ್ಬ ತಮ್ಮ ಕಾಯಿಲೆ ಬಂದು ಚಿಕ್ಕಂದಿನಲ್ಲೇ ತೀರಿ ಹೋದ ಮೇಲೆ ಅವಳೇ ನಾಗವೇಣಿ... ನಾಗು... ಮನೆಗೆ ಕಣ್ಣಾಗಿದ್ದಳು. ತುಸು ದೂರದ ಕನ್ನಡ ಶಾಲೆಗೆ ಹೋಗುತ್ತಿದ್ದಳು. ಓದಿಗಿಂತ ಹೆಚ್ಚಾಗಿ ಹಾಡು, ನೃತ್ಯ, ನಾಟಕಗಳಲ್ಲೇ ಆಸಕ್ತಿ ಹೆಚ್ಚು. ಎಲ್ಲದರಲ್ಲಿಯೂ ಮುಂದು. ರಂಗವಲ್ಲಿಯನ್ನಂತೂ ತುಂಬಾ ಚೆನ್ನಾಗಿ ಬಿಡಿಸೋಳು. ಅಯ್ಯಂಗಾರ್ ಆಂಡಾಳಮ್ಮನಿಂದ ನಾಲ್ಕು ಬೆರಳುಗಳಿಂದಲೂ ಒಮ್ಮೆಲೆ ಸಣ್ಣ ಎಳೆ ಬಿಡಿಸಲು ಕಲಿತಿದ್ದಳು. ಎಲ್ಲಿ ಸ್ಪರ್ಧೆ ಇದ್ದರೂ ಆಂಡಾಳಮ್ಮನಿಂದ ರಂಗವಲ್ಲಿಯ ಬಿಳಿ ಪುಡಿ ಪಡೆದು ಬಿಡಿಸಿ ಬಹುಮಾನ ಪಡೆಯುತ್ತಿದ್ದಳು. ತಂದೆತಾಯಿಗಳಿಗೆ ಇದಾವುದೂ ಗೊತ್ತಿಲ್ಲ. ಮಗಳು ಜಾಣೆ ಎಂಬುದಷ್ಟೇ ಗೊತ್ತು. ಕಣ್ರೆಪ್ಪೆಯಂತೆ ಕಾಪಾಡುತ್ತಿದ್ದರು. ದೇವಮ್ಮನಂತೂ ಸೆರಗಿನ ಮರೆಯಲ್ಲಿ ಬಚ್ಚಿಟ್ಟುಕೊಳ್ಳುತ್ತಿದ್ದಳು.

ಆದರೆಷ್ಟು ದಿನ? ಹರೆಯ ಕುಣಿಯುತ್ತ ಬಂದೇ ಬಿಟ್ಟಿತು. ಪುಟ್ಟ ಹುಡುಗಿಯ ಮೈಮನಗಳಲ್ಲಿ ಹೂವು ಬಿತ್ತಿತು. ಮೈದುಂಬಿ ಮೊರೆಯಿತು. ನಾಗು ಅರಳಿ ಹೂವಾದಳು. ನೋಡುವವರ ಕಣ್ಣು ಕುಕ್ಕುವಂತಾದಳು. ಹಾಳು ಹರೆಯ... ಅಷ್ಟಕ್ಕೇ ಬಿಡದೆ ಕನಸುಗಳಿಗೆ ಬಣ್ಣ ಬಳಿದು ರೆಕ್ಕೆ ಕಟ್ಟಿತು. ಹಾರುಗುದುರೆಯನ್ನೇರಿ ಬಂದ ರಾಜಕುಮಾರ ಬೇರಾರೂ ಅಲ್ಲ, ಪ್ರಕಾಶ... ಊರಿನವರ ಬಾಯಲ್ಲಿ ಪಕ್ಕಾಸ. ಊರ ಧಣಿಗಳ ಮನೆಯಲ್ಲಿ ಕೆಲಸ